# ‘ಸ್ತ್ರೀ 2’ ಜಯಭೇರಿ



ಸಣ್ಣದು ಎಂದುಕೊಂಡ ಸಿನಿಮಾ ಗಳಿಕೆಯ ಮೂಲಕ ದೊಡ್ಡದನ್ನು ಮಾಡಿ ತೋರಿಸಿದಾಗ, ತಾರಾ ನಟ–ನಟಿಯರೆಲ್ಲ ತಬ್ಬಿಬ್ಬಾಗದೆ ವಿಧಿಯಿಲ್ಲ. ‘ಸ್ತ್ರೀ 2’ ಎನ್ನುವ ಹಿಂದಿ ಚಿತ್ರದ ಯಶಸ್ಸಿನ ನಂತರ ಆ ಚಿತ್ರರಂಗದ ಓಣಿಗಳಲ್ಲಿ ಅದೇ ಪರಿಸ್ಥಿತಿ ಇದೆ.

ಶ್ರದ್ಧಾ ಕಪೂರ್ ಹಾಗೂ ರಾಜಕುಮಾರ್ ರಾವ್ ಅಭಿನಯದ ಚಿತ್ರ ‘ಸ್ತ್ರೀ 2’. ನಿರೇನ್ ಭಟ್ ಚಿತ್ರಕಥೆ ಬರೆದಿದ್ದು, ಅಮರ್ ಕೌಶಿಕ್ ನಿರ್ದೇಶನ ಮಾಡಿದ್ದಾರೆ. ಈ ಚಿತ್ರವು ₹425 ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ಆಗಸ್ಟ್ 29ರ ಹೊತ್ತಿಗೆ ಬಾಚಿದ್ದು, ₹500 ಕೋಟಿ ರೂಪಾಯಿ ಗಡಿಯನ್ನು ದಾಟುವುದರಲ್ಲಿ ಅನುಮಾನವೇ ಇಲ್ಲ. ‘ಬಾಹುಬಲಿ’, ‘ಸಲಾರ್’, ‘ದಂಗಲ್’ ತರಹದ ಸಿನಿಮಾಗಳ ಗಳಿಕೆಯನ್ನೂ ‘ಸ್ತ್ರೀ 2’ ಓವರ್‌ಟೇಕ್ ಮಾಡಿರುವುದು ಸಿನಿಮಾಲೋಕದಲ್ಲಿ ಹೊಸತಾರೆ ಯಾವಾಗ ಬೇಕಾದರೂ ಹೊಳೆದೀತು ಎನ್ನುವುದಕ್ಕೆ ಉದಾಹರಣೆಯಂತಿದೆ.

2018ರಲ್ಲಿ ಅಮರ್ ಕೌಶಿಕ್ ‘ಸ್ತ್ರೀ’ ಹಿಂದಿ ಚಿತ್ರ ನಿರ್ದೇಶಿಸಿದ್ದರು. ಆಗಲೂ ಅದು 125 ಕೋಟಿ ರೂಪಾಯಿಯಷ್ಟು ಮೊತ್ತವನ್ನು ತಂದುಕೊಟ್ಟಿತ್ತು. ಹಾರರ್ ಚಿತ್ರವೊಂದು ಇಷ್ಟೊಂದು ಗಳಿಕೆ ಕಂಡಿದ್ದು ಅಪರೂಪವೇ ಎನಿಸಿದ್ದ ಸಂದರ್ಭ ಅದು. ಎರಡನೇ ಭಾಗದಲ್ಲಿ ಅವರು ಇನ್ನಷ್ಟು ಯಶಸ್ಸನ್ನು ಕಂಡಿದ್ದಾರೆ. ಹಾರರ್ ಸಿನಿಮಾದಲ್ಲಿ ಹಾಸ್ಯರಸ ತರುವುದು ತುಂಬಾ ಕಷ್ಟ. ಅದು ಈಗ ಸತ್ಫಲ ಕೊಟ್ಟಿರುವುದು ಅಮರ್ ಕೌಶಿಕ್ ಜಾಣ್ಮೆಗೆ ಕನ್ನಡಿ ಹಿಡಿಯುತ್ತಿದೆ. ■



## ಹೇಡಿಗಳು ಸಾರ್ ಹೇಡಿಗಳು: ಪಾರ್ವತಿ

ಮಲೆಯಾಳಂ ಚಿತ್ರರಂಗದಲ್ಲೀಗ ದಾವಾನಿಲ ಭುಗಿಲೆದ್ದಿದೆ. ನಟರ ಬಳಗ ಮುಷ್ಟಿ ಬಿಗಿ ಮಾಡಿಕೊಂಡು, ನೆಲ ಗುದ್ದಬೇಕಾದ ಪರಿಸ್ಥಿತಿ. ಹೆಣ್ಣುಮಕ್ಕಳೆಲ್ಲ ಬಾಯಿ ತೆರೆಯಲಾರಂಭಿಸಿದ್ದಾರೆ. ನ್ಯಾಯಮೂರ್ತಿ ಹೇಮಾ ವರದಿ ಮಲೆಯಾಳಂ ಚಿತ್ರರಂಗದಲ್ಲಿನ ಲೈಂಗಿಕ ದೌರ್ಜನ್ಯದ ಅಧ್ಯಾಯಗಳ ಪುಟಗಳು ತೆರೆದುಕೊಳ್ಳುವಂತೆ ಮಾಡಿದೆ. ಅಲ್ಲಿನ ‘ಅಸೋಸಿಯೇಷನ್ ಆಫ್ ಮಲೆಯಾಳಂ ಮೂವಿ ಆರ್ಟಿಸ್ಟ್ಸ್’ ಅರ್ಥಾತ್ ‘ಅಮ್ಮ’ ಈಗ ಪಾಳುಬಿದ್ದ ಮನೆಯಂತಾಗಿದೆ. ಅಧ್ಯಕ್ಷ ಮೋಹನ್‌ಲಾಲ್ ಸೇರಿದಂತೆ ಎಲ್ಲ ಪದಾಧಿಕಾರಿಗಳೂ ಒಂದೇ ಸಲ ರಾಜೀನಾಮೆ ಕೊಟ್ಟಿದ್ದಾರೆ; ಅದೂ ವರ್ಚುವಲ್ ಮೀಟಿಂಗ್ ಮಾಡಿದ ಬಳಿಕ.

ಹಿಂದೆ ‘ಅಮ್ಮ’ ಸದಸ್ಯೆಯಾಗಿ ಇದ್ದ ನಟಿ ಪಾರ್ವತಿ ತಿರುವೊಟ್ಟು ಈಗ ದೇಶದಲ್ಲೇ ಹೆಸರು ಮಾಡಿರುವ ನಟಿ. ಕನ್ನಡದಲ್ಲಿ ಪುನೀತ್ ರಾಜ್‌ಕುಮಾರ್ ಅವರಿಗೆ ಜೋಡಿಯಾಗಿಯೂ ಎರಡು ಸಿನಿಮಾಗಳಲ್ಲಿ ಅಭಿನಯಿಸಿದ್ದವರು. ಅವರು ಸಂಸ್ಥೆಯೊಂದರ ಎಲ್ಲ ಪದಾಧಿಕಾರಿಗಳೂ ಹೀಗೆ ಏಕಕಾಲಕ್ಕೆ ರಾಜೀನಾಮೆ ಕೊಟ್ಟಿರುವುದನ್ನು ನಿರ್ಭಿಡೆಯಿಂದ ವಿಶ್ಲೇಷಿಸಿದ್ದಾರೆ.

‘ಹೇಡಿಗಳು ಮಾಡುವ ಕೆಲಸ ಇದು’ ಎಂದು ನೇರವಾಗಿ ಪ್ರತಿಕ್ರಿಯಿಸಿರುವ ಅವರು, ‘ಮಾಧ್ಯಮದ ಎದುರು ಸರಿಯಾದ ರೀತಿಯಲ್ಲಿ ಮಾತನಾಡಬೇಕಾದ ಸಂದರ್ಭ ಬಂದಾಗ ಎದ್ದೋಡುವ ಜಾಯಮಾನ ಇದು’ ಎಂದು ಟೀಕಿಸಿದ್ದಾರೆ.

ಇನ್ನೂ ಮುಂದುವರಿದು, ‘ಅಮ್ಮ ಎನ್ನುವುದು ಭಯದ ವಾತಾವರಣದಲ್ಲೇ ಇದ್ದಂತಹ ಸಂಸ್ಥೆ. ಎಲ್ಲರಿಗೂ ಯಾವ್ಯಾವುದಕ್ಕೋ ಆತಂಕ. ಏನು ಹೇಳಿದರೆ ಹೆಚ್ಚು, ಏನು ಹೇಳಿದರೆ ಕಡಿಮೆ ಎನ್ನುವ ಭಾವ. ನಾನು ಆ ಸಂಸ್ಥೆಯಲ್ಲಿನ ಈ ಧೋರಣೆಯನ್ನು ಹಿಂದೆಯೇ ಗಮನಿಸಿದ್ದೆ. ಅದಕ್ಕೇ ರಾಜೀನಾಮೆ ಕೊಟ್ಟು ಅಲ್ಲಿಂದ ಹೊರನಡೆದು ಬಂದಿದ್ದೆ’ ಎಂದೂ ಜಾಡಿಸಿದ್ದಾರೆ.

ಮೋಹನ್‌ಲಾಲ್ ಅವರಂತಹ ಅನುಭವಿ ನಟ ಅಧ್ಯಕ್ಷರಾಗಿದ್ದ ಸಂಸ್ಥೆಯೊಂದು ಹೀಗೆ ನಿಸ್ತೇಜವಾದದ್ದು, ಮಹತ್ವದ ಸಂದರ್ಭದಲ್ಲಿ ಉತ್ತರಿಸುವ ಬದಲಾಗಿ ಮಾಧ್ಯಮದ ಮೈಕುಗಳಿಗೆ ಬೆನ್ನುಮಾಡಿದ್ದು ಸಹಜವಾಗಿಯೇ ಎಷ್ಟೋ ನಟಿಯರಿಗೆ ಬೇಸರ ತರಿಸಿದೆ.

ಗುಣಮಟ್ಟದ ಸಿನಿಮಾಗಳಿಂದ ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಸದ್ದು ಮಾಡುತ್ತಿರುವ ಮಲೆಯಾಳಂ ಚಿತ್ರರಂಗ ಲೈಂಗಿಕ ದೌರ್ಜನ್ಯಗಳ ಕಾರಣದಿಂದಾಗಿ ಸುದ್ದಿಯಾಗಿರುವುದು ಸಹೃದಯಿ ಚಿತ್ರನಿರ್ಮಾತೃಗಳಿಗೂ ವಿಷಾದದ ಸಂಗತಿಯಾಗಿದೆ.

ಒಂದರ ಮೇಲೊಂದು ದೂರುಗಳು ದಾಖಲಾಗುತ್ತಿದ್ದರೆ, ಸ್ಟಾರ್ ಪ್ರಭಾವಳಿ ನಿಧನಿಧಾನವಾಗಿ ಮಸುಕಾದಂತೆ ಭಾಸವಾಗುತ್ತಿದೆ. ಪಾರ್ವತಿ ತಿರುವೊಟ್ಟು ಸಾತ್ವಿಕ ಸಿಟ್ಟಿನ ನುಡಿಗಳ ನಡುವೆ ಈ ಎಲ್ಲ ಅರ್ಥವೂ ಹುದುಗಿದೆ. ■